**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.**

**PCR 22/2024**

| | | |
|---|---|---|
| ಸಾಕ್ಷಿಯ ಹೆಸರುಃ | ಪ್ರಶಾಂತ್ | ಫ್ರಾಸಾಃಃ 2 |
| ತಂದೆಯ ಹೆಸರುಃ | ನಾಗಯ್ಯ | |
| ವಯಸ್ಸುಃ | 23 ವರ್ಷ | ಪ್ರಮಾಣೀಕರಿಸಿದ ದಿಃ 31/01/2026 |
| ಉದ್ಯೋಗಃ | ವ್ಯವಸಾಯ | |
| ವಾಸ ಸ್ಥಳಃ | ನಾಗನಹಳ್ಳಿ ಗ್ರಾಮ, ಪಿರಿಯಾಪಟ್ಟಣ ತಾ | |

**ಸಾಕ್ಷಿಯ ಪ್ರಮಾಣೀಕೃತ ಹೇಳಿಕೆ**

ದಿಃ 09.05.2023 ರಂದು ರಾತ್ರಿ 8.30 ಗಂಟೆ ಸಮಯದಲ್ಲಿ ನಾನು ಡೈರಿಗೆ ಹಾಲನ್ನು ಹಾಕಿ ಪುಷ್ಪ ರವರ ಮನೆಯ ಬಳಿ ಬರುತ್ತಿದ್ದೆ. ಆಗ ಪುಷ್ಪ ರವರ ಮನೆಯ ಬಳಿ ವೇದಾವತಿ, ಶಶಿ, ಸುಮ, ರೇಣುಕ, ಸರೋಜಮ್ಮ, ತಿಮ್ಮಮ್ಮ, ಗೀತ, ಈರಮ್ಮ, ರತ್ನಮ್ಮ ಮತ್ತು ಇತರರು ಪುಷ್ಪ ರವರೊಂದಿಗೆ ಜಗಳ ಮಾಡುತ್ತಿದ್ದರು. ಆಗ ನಾನು ಅವರಿಗೆ ಸಮಾಧಾನ ಮಾಡಿ ಕಳುಹಿಸಿ ಕೊಟ್ಟೆ

2. ಅದೇ ವರುಷ ಜೂನ್ ತಿಂಗಳಿನಲ್ಲಿ ರಾತ್ರಿ 8.30 ಗಂಟೆ ಸಮಯದಲ್ಲಿ ನಾನು ಡೈರಿಗೆ ಹಾಲನ್ನು ಹಾಕಿ ಪುಷ್ಪ ರವರ ಮನೆಯ ಬಳಿ ಬರುತ್ತಿದ್ದಾಗ ಮೇಲ್ಕಂಡವರು ಪುಷ್ಪ ರವರೊಂದಿಗೆ ಗಲಾಟೆ ಮಾಡುತ್ತಿದ್ದರು. ಶಶಿ ರವರು ಪುಷ್ಪ ರವರ ಪೋನ್ ಅನ್ನು ಕಿತ್ತು ಕೊಂಡಿದ್ದರು. ವೇದಾವತಿ, ಸುಮ, ರೇಣುಕ, ರವರು ಪುಷ್ಪ ರವರ ಕುತ್ತಿಗೆಯಲ್ಲಿದ್ದ ಚಿನ್ನದ ಸರವನ್ನು ಕಿತ್ತು ಕೊಂಡಿದ್ದರು. ಸದರಿಯವರು ಪುಷ್ಪ ರವರಿಗೆ ಕೆಟ್ಟ ಭಾಷೆಯಲ್ಲಿ ಬೈದು ಹೊಡೆಯುತ್ತಿದ್ದರು. ಸಮಾಧಾನ ಪಡಿಸಿ ನಾನು ಪುನಃ ಕಳುಹಿಸಿಕೊಟ್ಟೆ ನಂತರ

ಪುಷ್ಪ ರವರು ಬೆಟ್ಟದಪುರ ಪೊಲೀಸ್ ಠಾಣೆಗೆ ದೂರನ್ನು ಸಲ್ಲಿಸುತ್ತೇನೆಂದು ಹೋದರು. ಸ್ಥಳಕ್ಕೆ ಪೋಲೀಸರು ಬಂದು ಮಹಜರು ಕ್ರಮ ಜರುಗಿಸದೇ ನನ್ನನ್ನು ಮಾರನೇ ದಿನ ಪೊಲೀಸ್ ಠಾಣೆಗೆ ಕರೆಸಿ ಸಹಿ ಮಾಡಲು ತಿಳಿಸಿದರು. ಆ ದಾಖಲೆಯನ್ನು ನನಗೆ ಓದಲು ಬಿಡಲಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಓ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಪಿರಿಯಾಪಟ್ಟಣ.